ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 17-6-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಅಗ್ನಿಶಾಮಕ, ಗೃಹರಕ್ಷಕರು ಹಾಗೂ ಪೌರ ರಕ್ಷಕರಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ.<br>ಪದಕ ಪ್ರದಾನ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಅಧ್ಯಕ್ಷತೆ:<br>ಕೆ.ಜೆ. ಜಾರ್ಜ್,<br>ಗೃಹ ಸಚಿವರು | 18-06-2015<br>ಗುರುವಾರ<br>ಬೆಳಗ್ಗೆ<br>9-00 ಗಂಟೆಗೆ | ಆರ್. ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029 |
| 2. | ವಿಶ್ವ ರಕ್ತದಾನಿಗಳ ದಿನ ಆಚರಣೆ:<br>ಉದ್ಘಾಟನೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಅಧ್ಯಕ್ಷತೆ:<br>ಆರ್. ರೋಷನ್ ಬೇಗ್, ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವರು.<br>ಉಪಸ್ಥಿತಿ:<br>ಯು. ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು<br>ಶರಣಪ್ರಕಾಶ್ ಪಾಟೀಲ್,<br>ವೈದ್ಯಕೀಯ ಶಿಕ್ಷಣ ಖಾತೆ ಸಚಿವರು. | 18-06-2015<br>ಗುರುವಾರ<br>ಬೆಳಗ್ಗೆ<br>10-30 ಗಂಟೆಗೆ | ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು. |
| 3. | ಪತ್ರಿಕಾಗೋಷ್ಠಿ:<br>ಹೆಚ್.ಎಸ್. ಮಹದೇವಪ್ರಸಾದ್,<br>ಸಹಕಾರ ಮತ್ತು ಸಕ್ಕರೆ ಸಚಿವರು | 18-06-2015<br>ಗುರುವಾರ<br>ಅಪರಾಹ್ನ<br>12-30 ಗಂಟೆಗೆ | ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಮಾಧ್ಯಮ ಮುಖ್ಯಸ್ಥರ ಗಮನಕ್ಕೆ

ಜೂನ್ 29 ರಿಂದ ಬೆಳಗಾವಿಯಲ್ಲಿ ನಡೆಯುವ ರಾಜ್ಯ ವಿಧಾನ ಮಂಡಲದ ಮಳೆಗಾಲದ ಅಧಿವೇಶನಕ್ಕೆ ತಮ್ಮ ಮಾಧ್ಯಮದಿಂದ ನಿಯೋಜನೆಗೊಳ್ಳಲಿರುವ ಪ್ರತಿನಿಧಿಗಳ ವಿವರವನ್ನು ಜೂನ್ 25 ರ ಮಧ್ಯಾಹ್ನ 1-00 ಗಂಟೆಯೊಳಗೆ ಈ ಕೆಳಕಂಡ ನಮೂನೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಒದಗಿಸಿ, ಹೆಸರನ್ನು ನೊಂದಾಯಿಸಲು ಕೋರಿದೆ.

**ವಿಶೇಷ ಸೂಚನೆ:** ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಮುಖ ದಿನ ಪತ್ರಿಕೆ ಮತ್ತು ಪ್ರಮುಖ ಸುದ್ದಿ ವಾಹಿನಿಗಳಿಗೆ ಮಾತ್ರ ಅವಕಾಶ.

ಬೆಂಗಳೂರಿನಿಂದ ಪ್ರಕಟಗೊಳ್ಳುವ ಪ್ರಮುಖ ದಿನಪತ್ರಿಕೆಯ ಗರಿಷ್ಠ ನಾಲ್ವರು ವರದಿಗಾರರು ಮತ್ತು ಓರ್ವ ಛಾಯಾಗ್ರಾಹಕರು ಹಾಗೂ ಪ್ರಮುಖ ಸುದ್ದಿ ವಾಹಿನಿಯಿಂದ ನಾಲ್ವರು ವರದಿಗಾರರು ಮತ್ತು ನಾಲ್ವರು ವೀಡಿಯೋಗ್ರಾಹಕರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಈ ಆಮಂತ್ರಣವು ರಾಜ್ಯ ವಿಧಾನಸಭೆ ಮತ್ತು ರಾಜ್ಯ ವಿಧಾನ ಪರಿಷತ್ ಪಾಸ್‌ಗಳನ್ನು ಈಗಾಗಲೇ ಪಡೆದಿರುವವರ ಹೆಸರುಗಳನ್ನು ಮಾತ್ರ ಕಳುಹಿಸಲು ಕೋರಲಾಗಿದೆ.

### ನಮೂನೆ

| ಕ್ರಮ ಸಂಖ್ಯೆ | ವರದಿಗಾರರ ಹೆಸರು, ಪದನಾಮ, | ಮಾಧ್ಯಮ ಸಂಸ್ಥೆ | ಇ-ಮೇಲ್ ವಿಳಾಸ | ಮೊಬೈಲ್ ಸಂಖ್ಯೆ |
|---|---|---|---|---|
| | | | | |

## ಪತ್ರಿಕಾ ಪ್ರಕಟಣೆ

# 3,600 ಎನ್.ಸಿ.ಸಿ. ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ

ಬೆಂಗಳೂರು, ಜೂನ್ 17 (ಕರ್ನಾಟಕ ವಾರ್ತೆ)

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಜೂನ್ 21 ರಂದು 3,600 ಎನ್.ಸಿ.ಸಿ. ವಿದ್ಯಾರ್ಥಿಗಳು ಯೋಗ ಪ್ರದರ್ಶನ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಯೋಗಪಟುಗಳಾದ ಎನ್.ಸಿ.ಸಿ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಯೋಗಾಸನ ಮಾಡಲು ಅಗತ್ಯವಾದ ಕಾರ್ಪೇಟ್ ಹಾಗೂ ಅಗತ್ಯ ಫಲಹಾರ ಮಂದಿರಗಳನ್ನು ತೆರೆಯಲು ಅವಕಾಶ ಮಾಡಿಕೊಡಲಾಗುವುದು. ಆಸಕ್ತರು ಕೂಡಲೇ ಕಮಾಂಡಿಂಗ್ ಆಫೀಸರ್, 8 ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ. ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಕಮಾಂಡಿಂಗ್ ಆಫೀಸರ್, 8 ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಕಟ್ಟಡ, ಎರಡನೇ ಮಹಡಿ, ನಂ 8, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052. ಮೊಬೈಲ್ ಸಂಖ್ಯೆ 09481177015 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್.

# ಜೂನ್ 21 ರಂದು ವಿಶ್ವ ಯೋಗ ದಿನಾಚರಣೆ

**ಬೆಂಗಳೂರು, ಜೂನ್ 17 (ಕರ್ನಾಟಕ ವಾರ್ತೆ)**

ವಿಶ್ವದ ಬಹುತೇಕ ಭಾಗಗಳಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು ಈ ಸಂಬಂಧ ಕರ್ನಾಟಕ ಒಲಂಪಿಕ್ ಸಂಸ್ಥೆ ಹಾಗೂ ಶ್ವಾಸ ಸಂಸ್ಥೆಯ ಸಹಯೋಗದೊಂದಿಗೆ ಹಾಗೂ ರಾಜ್ಯ ಸರ್ಕಾರದ ಸಹಕಾರದೊಂದಿಗೆ ಜೂನ್ 21 ರಂದು ನಗರದ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಂದು ಬೆಳಿಗ್ಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಹಾಗೂ ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಪಾಲರು ಸಹ ಭಾಗವಹಿಸಲಿದ್ದಾರೆ. ಸರ್ಕಾರದ ಹಲವು ಇಲಾಖೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

ಬಾಬು:ಜಿಪಿಆರ್.

# ತ್ಯಾಜ್ಯ ನೀರಿನ ನಿರ್ವಹಣೆ ಕುರಿತತಂತೆ ಒಂದು ದಿನದ ಕಾರ್ಯಾಗಾರ

**ಬೆಂಗಳೂರು, ಜೂನ್ 17 (ಕರ್ನಾಟಕ ವಾರ್ತೆ)**

ರಾಜ್ಯ ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ನಗರ ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಹಾಗೂ ಕರ್ನಾಟಕ ಜ್ಞಾನ ಆಯೋಗ ಇವರುಗಳ ಸಂಯುಕ್ತಾಶ್ರಯದಲ್ಲಿ ಜೂನ್ 19 ರಂದು ಬೆಂಗಳೂರು ವಿಕಾಸಸೌಧ 4ನೇ ಮಹಡಿಯ ಕೊಠಡಿ ಸಂಖ್ಯೆ 419 ರಲ್ಲಿ ತ್ಯಾಜ್ಯ ನೀರಿನ ನಿರ್ವಹಣೆ ಕುರಿತತಂತೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂನ್ 19 ರಂದು ಬೆಳಿಗ್ಗೆ 9-30 ಗಂಟೆಗೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ನಗರಾಭಿವೃದ್ಧಿ ಸಚಿವ ವಿನಯ್ ಕುಮಾರ್ ಸೊರಕೆ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆವಹಿಸುವರು. ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಬಾಬು:ಜಿಪಿಆರ್.

# <u>ಮೋಟರೀಕೃತ ಮೀನುಗಾರಿಕಾ ದೋಣಿ ಗುರುತಿಸುವಿಕೆ</u>

**ಬೆಂಗಳೂರು, ಜೂನ್ 17 (ಕರ್ನಾಟಕ ವಾರ್ತೆ)**

ರಾಜ್ಯದ ಕರಾವಳಿಯಲ್ಲಿರುವ ಮೋಟರೀಕೃತ ಮೀನುಗಾರಿಕೆ ದೋಣಿಗಳಿಗೆ ಸರ್ಕಾರದಿಂದ ಪರ್ಮಿಟ್‌ಗಳನ್ನು ನೀಡಿ ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ. ಹಲವಾರು ಅರ್ಹ ಮೀನುಗಾರಿಕೆ ದೋಣಿಗಳಿಗೆ ಪರ್ಮಿಟ್ ನೀಡಿರುವುದಿಲ್ಲವೆಂದು ಹಾಗೂ ಕಡಿಮೆ ಪ್ರಮಾಣದಲ್ಲಿ ಸೀಮೆಎಣ್ಣೆ ನೀಡಲಾಗುತ್ತಿದೆಯೆಂದು ಮೀನುಗಾರರು ದೂರು ಅರ್ಜಿ ಸಲ್ಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ಮೀನುಗಾರಿಕೆ ಹಾಗೂ ಆಹಾರ ನಾಗರೀಕ ಸೇವಾ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಅಧಿಕಾರಿಗಳು ಜಂಟಿಯಾಗಿ ದಿನಾಂಕ 20-06-2015 ರಂದು ಮೋಟರೀಕೃತ ದೋಣಿಗಳನ್ನು ವಿವಿಧ ಸ್ಥಳಗಳಲ್ಲಿ ತಪಾಸಣೆ ನಡೆಸಿ ಅರ್ಹ ಮೋಟರೀಕೃತ ಮೀನುಗಾರಿಕೆ ದೋಣಿಗಳನ್ನು ಗುರುತಿಸಲಿದ್ದಾರೆ. ಆದುದರಿಂದ ಎಲ್ಲಾ ಮೋಟರೀಕೃತ ದೋಣಿಗಳ ಮಾಲೀಕರು ಮೀನುಗಾರಿಕೆ ಇಲಾಖೆಯ ತಾಲ್ಲೂಕು/ಜಿಲ್ಲಾ/ಅಧಿಕಾರಿಗಳನ್ನು ಸಂಪರ್ಕಿಸಿ ನಿಗದಿಪಡಿಸಿದ ಸ್ಥಳ ಹಾಗೂ ವೇಳೆಯಲ್ಲಿ ಮೋಟರೀಕೃತ ದೋಣಿ ಮತ್ತು ಇಂಜಿನನ್ನು ತಪಾಸಣೆಗೆ ಹಾಜರುಪಡಿಸಲು ಕೋರಿದೆ. ತಪಾಸಣೆ ವೇಳೆಯಲ್ಲಿ ಮೀನುಗಾರರು ಗುರುತಿನ ಚೀಟಿ, (ಆಧಾರ್‌ಕಾರ್ಡ್/ಬಯೋಮೆಟ್ರಿಕ್ ಕಾರ್ಡ್/ಮತದಾನದ ಚೀಟಿ) ದೋಣಿ ನೋಂದಣಿಯ ಮೂಲ ಪ್ರಮಾಣ ಪತ್ರ, ಸೀಮೆಎಣ್ಣೆ ಪರ್ಮಿಟ್ ಪುಸ್ತಕ, ಇಂಜಿನ್‌ನ ಅಶ್ವಶಕ್ತಿ ಹಾಗೂ ಖರೀದಿಯ ದಾಖಲಾತಿಗಳನ್ನು ಹಾಜರುಪಡಿಸಬೇಕು.

ಈ ತಪಾಸಣೆ ಆಧಾರದ ಮೇಲೆ ಮೋಟರೀಕೃತ ದೋಣಿಗಳಿಗೆ 2015-16ನೇ ಸಾಲಿನಲ್ಲಿ ಮೀನು ಶಿಕಾರಿ ಮಾಡಲು ಪರವಾನಗಿಯನ್ನು ನೀಡಲಾಗುವುದು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಸೀಮೆಎಣ್ಣೆ ಪರ್ಮಿಟ್ ನೀಡಲು ಪರಿಗಣಿಸಲಾಗುವುದು. ತಪಾಸಣೆಗೆ ಹಾಜರಾಗದಿರುವ ಮೋಟರೀಕೃತ ದೋಣಿಗಳ ನೋಂದಣಿಯನ್ನು ರದ್ದುಪಡಿಸಲು ಕ್ರಮವಹಿಸಲಾಗುವುದು. ಆದ್ದರಿಂದ, ಎಲ್ಲಾ ಮೀನುಗಾರರೂ ತಪಾಸಣೆಗೆ ಅಗತ್ಯ ದಾಖಲಾತಿಗಳೊಂದಿಗೆ ದೋಣಿ ಮತ್ತು ಇಂಜಿನ್ ಅನ್ನು ಹಾಜರುಪಡಿಸಿ ಸಹಕಾರ ನೀಡಬೇಕಾಗಿ ಮೀನುಗಾರಿಕೆ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ಪಲ್ಲವಿ : ಬಾಬು : ಹವಿತ

# ವಿಧಾನಸಭೆ ಅಧಿವೇಶನ

ಬೆಂಗಳೂರು,ಜೂ.17 (ಕರ್ನಾಟಕ ವಾರ್ತೆ) :

ಹದಿನಾಲ್ಕನೇ ವಿಧಾನ ಸಭೆಯ ಎಂಟನೇ ಅಧಿವೇಶನವು 29ನೇ ಜೂನ್, 2015 ರ ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ ಹಾಗೂ 13ನೇ ಜುಲೈ 2015 ರ ಸೋಮವಾರ ಬೆಂಗಳೂರಿನ ವಿಧಾನಸೌಧದಲ್ಲಿರುವ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಂ.ಗುರುರಾಜ ಅವರು ತಿಳಿಸಿದ್ದಾರೆ.

**ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ :-** ಜೂನ್.29 ಸರ್ಕಾರಿ ಕಾರ್ಯಕಲಾಪ, ಜೂ.30 ಸರ್ಕಾರಿ ಕಾರ್ಯಕಲಾಪ, ಜು.01- ಸರ್ಕಾರಿ ಕಾರ್ಯಕಲಾಪ, ಜು.02- ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.03- ಸರ್ಕಾರಿ ಕಾರ್ಯಕಲಾಪ, ಜು.04- ಕಾರ್ಯಕಲಾಪ ಇರುವುದಿಲ್ಲ, ಜು.05- ಸಾರ್ವತ್ರಿಕ ರಜಾ ದಿನ, ಜು.06- ಸರ್ಕಾರಿ ಕಾರ್ಯಕಲಾಪ, ಜು.07- ಸರ್ಕಾರಿ ಕಾರ್ಯಕಲಾಪ, ಜು.08- ಸರ್ಕಾರಿ ಕಾರ್ಯಕಲಾಪ, ಜು.09- ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.10- ಸರ್ಕಾರಿ ಕಾರ್ಯಕಲಾಪ, ಜು.11- ರಜಾದಿನ, ಜು.12- ಸಾರ್ವತ್ರಿಕ ರಜಾದಿನ,

**ಬೆಂಗಳೂರಿನ ವಿಧಾನಸೌಧದಲ್ಲಿ :-** ಜು.13- ಸರ್ಕಾರಿ ಕಾರ್ಯಕಲಾಪ, ಜು.14- ಸರ್ಕಾರಿ ಕಾರ್ಯಕಲಾಪ, ಜು.15- ಸರ್ಕಾರಿ ಕಾರ್ಯಕಲಾಪ, ಜು.16- ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.17- ಸರ್ಕಾರಿ ಕಾರ್ಯಕಲಾಪ, ಜು.18- ಸಾರ್ವತ್ರಿಕ ರಜಾದಿನ, ಜು.19- ಸಾರ್ವತ್ರಿಕ ರಜಾದಿನ, ಜು.20- ಸರ್ಕಾರಿ ಕಾರ್ಯಕಲಾಪ, ಜು.21- ಸರ್ಕಾರಿ ಕಾರ್ಯಕಲಾಪ, ಜು.22- ಸರ್ಕಾರಿ ಕಾರ್ಯಕಲಾಪ, ಜು.23- ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.24- ಸರ್ಕಾರಿ ಕಾರ್ಯಕಲಾಪ